

# ಏಕ ಚಕ್ರಾಧಿಪತಿ



ಸೈಕಲ್‌ನಲ್ಲಿ ಎರಡು ಗಾಲಿಗಳಿದ್ದರೂ ಸಹ ಬ್ಯಾಲೆನ್ಸ್ ಮಾಡಿ ಓಡಿಸುವುದು ಕೆಲವರಿಗೆ ಕಷ್ಟದ ಕೆಲಸ. ಇನ್ನು ಕೇವಲ ಒಂದೇ ಒಂದು ಗಾಲಿಯಿದ್ದರೆ ಅದರ ಮೇಲೆ ಸವಾರಿ ಮಾಡುವುದು ಸಾಹಸದ ಕೆಲಸವೇ ಸರಿ. ಇದಕ್ಕೆ ಸಾಕಷ್ಟು ಏಕಾಗ್ರತೆ ಹಾಗೂ ಸವಾರಿಯಲ್ಲಿ ಸಮತೋಲನ ಸಾಧಿಸಿರಬೇಕು.

ಆದರೆ ಇಲ್ಲೊಬ್ಬ ಯುವಕನಿದ್ದಾನೆ ನೋಡಿ. ಈತ ಜರ್ಮನಿಯ ಲುಟ್ಜ್ ಇಚ್ಹೊಲ್ಜ್. ಇವನಿಗೆ ಒಂದು ಗಾಲಿಯ ಸೈಕಲ್ ಏರುವುದೆಂದರೆ ಎರಡು ಚಕ್ರಗಳ ಸೈಕಲ್ ಏರಿದಂತೆಯೇ ಬಲು ಸರಾಗದ ಕೆಲಸ.

26 ವರ್ಷ ವಯಸ್ಸಿನ ಈತ ಈಗಾಗಲೇ ಮೂರು ವಿಶ್ವ ಚಾಂಪಿಯನ್ ಪಟ್ಟವನ್ನು ಪಡೆದಿದ್ದಾನೆ. ಇಸ್ರೇಲ್‌ನ ಟೆಲ್ ಆವಿನ್ ಎಂಬಲ್ಲಿ ತನ್ನ ವಿಶಿಷ್ಟ ಸವಾರಿಯನ್ನು ಮಾಡಿ ಜನರು ಬೆರಗುಗೊಳ್ಳುವಂತೆ ಮಾಡಿದ್ದಾನೆ.

ಒಂದಾದರೊಂದಂತೆ ಜೋಡಿಸಿದ್ದ ಬಿಯರ್ ಬಾಟಲ್‌ಗಳ ಮೇಲೆ ಒಂದೇ ಚಕ್ರದ ಸೈಕಲ್‌ನಲ್ಲಿ ಕ್ರಮಿಸುವುದೆಂದರೆ ಈತನಿಗೆ ಬಲು ಪ್ರೀತಿ. 127 ಬಿಯರ್ ಬಾಟಲ್‌ಗಳ ಮೇಲೆ 8.93 ಮೀಟರ್ ಕ್ರಮಿಸಿ ದಾಖಲೆ ಸೃಷ್ಟಿಸಿದ್ದಾನೆ. ಅಲ್ಟ್ಸ್ ಮತ್ತು ಮೊರೆಕ್ಕೊ ನಗರಗಳವರೆಗೆ ತನ್ನ ಏಕ ಚಕ್ರದ ಸೈಕಲಿನಲ್ಲಿ ಕ್ರಮಿಸಿರುವ ಈತನಿಗೆ ಗಿನ್ನಿಸ್ ವಿಶ್ವ ದಾಖಲೆಯನ್ನು ಮಾಡುವ ಹಂಬಲವಿದೆಯಂತೆ.

■ ವಿದ್ಯಾ ವಿ ಹಾಲಭಾವಿ